# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ 04 ಇ(1)/2024–25

ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ: 02–04–2024.

## ::ಪತ್ರಿಕಾ ಪ್ರಕಟಣೆ::

2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು 'ಬಿ' ವೃಂದದ ಒಟ್ಟು 384 ಹುದ್ದೆಗಳಿಗೆ ದಿನಾಂಕ:26–02–2024ರಂದು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯಲ್ಲಿ ಉಳಿಕೆ ಮೂಲ ವೃಂದದ ಮತ್ತು ಹೈದ್ರಾಬಾದ್–ಕರ್ನಾಟಕ ವೃಂದದ ಒಟ್ಟು ಹುದ್ದೆಗಳ ಅಂಕಿ–ಅಂಶಗಳು (ಆರ್.ಪಿ.ಸಿ. 307+ಹೈ.ಕ. 77) ಮತ್ತು ವರ್ಗೀಕರಣದಲ್ಲಿ COMMERCIAL TAX INSPECTOR ಎಂದು ನಮೂದಾಗಿದ್ದು, ಸದರಿ ನಮೂದನ್ನು ಆರ್.ಪಿ.ಸಿ. 310 ಮತ್ತು ಹೈ.ಕ. 74 ಮತ್ತು COMMERCIAL TAX OFFICER ಎಂದು ತಿದ್ದುಪಡಿ ಮಾಡುವ ಸಲುವಾಗಿ ದಿನಾಂಕ:02–04–2024ರಂದು ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ ಹಾಗೂ ಸದರಿ ಹುದ್ದೆಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 15–04–2024ರವರೆಗೆ ಮುಂದೂಡಲಾಗಿರುತ್ತದೆ ಮತ್ತು ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ:07–07–2024ರಂದು ನಡೆಸಲು ಮರುನಿಗದಿಪಡಿಸಲಾಗಿದ್ದು, ಆಯೋಗದ ವೆಬ್‌ಸೈಟ್ http://kpsc.kar.nic.inನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.

**ವಿಶೇಷ ಸೂಚನೆ:** ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997 ಹಾಗೂ ತಿದ್ದುಪಡಿ ನಿಯಮಗಳನ್ವಯ ಮುಖ್ಯಪರೀಕ್ಷೆಯು ಕಡ್ಡಾಯ ಕನ್ನಡ ಮತ್ತು ಕಡ್ಡಾಯ ಇಂಗ್ಲೀಷ್ ಎಂಬ ಎರಡು ಅರ್ಹತಾದಾಯಕ ಪತ್ರಿಕೆಗಳನ್ನೊಳಗೊಂಡಿರುತ್ತದೆ. ಆಯೋಗವು ಈ ಹಿಂದೆ ಜರುಗಿಸಿರುವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾಗಿದ್ದಾಗ್ಯೂ ಸಹ ಮೇಲಿನ ನಿಯಮಗಳನ್ವಯ 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಮುಖ್ಯಪರೀಕ್ಷೆಗೆ ಅರ್ಹರಾಗುವ ಎಲ್ಲಾ ಅಭ್ಯರ್ಥಿಗಳು ಸದರಿ ಅರ್ಹತಾದಾಯಕ ಪತ್ರಿಕೆಗಳನ್ನು ಕಡ್ಡಾಯವಾಗಿ ಬರೆಯಬೇಕಿರುತ್ತದೆ.

ಸಹಿ/–
**(ಡಾ.ರಾಕೇಶ್ ಕುಮಾರ್ ಕೆ.)**
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.